# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಬಿ.ಎಂ ಫಾರೂಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 329 |
| ಉತ್ತರಿಸುವ ದಿನಾಂಕ | 15.02.2023 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು- ಉಳ್ಳಾಲದ ಮುಖ್ಯ ಕಛೇರಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ನಿರ್ಮಿಸಲ್ಪಟ್ಟ 390 ಮನೆಗಳು ಇನ್ನೂ ಹಂಚಿಕೆಯಾಗದಿರಲು ಕಾರಣಗಳೇನು ; (ಸದರಿ ಯೋಜನೆಯ ವ್ಯಾಪ್ತಿ ಖರ್ಚು ವೆಚ್ಚ ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಉಳ್ಳಾಲ- ನಗರಸಭೆ ವ್ಯಾಪ್ತಿಯಲ್ಲಿ 390 ಮನೆಗಳ ಆಶ್ರಯ ಕಾಲೋನಿಯನ್ನು ರಚಿಸಿದ್ದು, ಗುತ್ತಿಗೆದಾರರಿಗೆ ಪ್ರತಿ ಮನೆಗೆ ತಲಾ ರೂ 25000/- ದಂತೆ ರೂ 97,50,000 ಗಳನ್ನು ಪಾವತಿಸಲಾಗಿದೆ. ಉಳ್ಳಾಲ- ನಗರಸಭೆ ವ್ಯಾಪ್ತಿಗೆ ಮೂಲಭೂತ ಸೌಕರ್ಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಒಳಚರಂಡಿ ವ್ಯವಸ್ಥೆಗೆ ಈಗಾಗಲೇ ರೂ 61.71 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿ ಕೈಗೆತ್ತಿಕೊಂಡಿದ್ದು, ಶೇ. 75 ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>ಸದರಿ ಆಶ್ರಯ ಕಾಲೋನಿಗೆ ಸಂಬಂಧಿಸಿದಂತೆ Miscellaneous Appeal 71/2003 CJM, Mangaluru and Miscellaneous appeal 26/2004 CJM, Mangaluru ರಂತೆ ಈ ವಸತಿ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಆಗುವವರೆಗೆ ಫಲಾನುಭವಿಗಳಿಗೆ ಹಂಚಿಕೆ ಮಾಡದಂತೆ ಆದೇಶವಿರುವ ಕಾರಣ ಹಂಚಿಕೆ ಮಾಡಲು ಸಾಧ್ಯವಾಗಿರುವುದಿಲ್ಲ. |
| ಆ) | ಹಲವು ವರ್ಷಗಳ ಹಿಂದೆಯೇ ನಿರ್ಮಾಣವಾಗಿ ಪ್ರಸ್ತುತ ಹಂಚಿಕೆಯಾದರೆ ವಾಸಯೋಗ್ಯ ಹಾಗೂ ಸುರಕ್ಷತೆಯಿಂದ ಕೂಡಿರುತ್ತವೆಯೇ ; (ವಿವರ ನೀಡುವುದು) | ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ ಇವರ ದಿನಾಂಕ: 23.08.2019 ರ ವರದಿಯಲ್ಲಿ ಸದರಿ ಒಂಬತ್ತುಕೆರೆ ಆಶ್ರಯ ಯೋಜನೆಯಡಿ ನಿರ್ಮಿಸಲಾದ ವಸತಿ ಗೃಹಗಳನ್ನು ಪರಿಶೀಲಿಸಿದಾಗ ಬಹುತೇಕ ವಸತಿ ಕಟ್ಟಡಗಳು ಶಿಥಿಲ ವ್ಯವಸ್ಥೆಯಲ್ಲಿದ್ದು, ಕೆಲವು ಮನೆಗಳು ಕುಸಿದು ಬಿದ್ದಿದ್ದು, ದುರಸ್ಥಿ ಮಾಡಲು ಆಗದ ಸ್ಥಿತಯಲ್ಲಿರುತ್ತದೆ. ಮತ್ತು ಸದರಿ ಮನೆಗಳಿಗೆ ಕಿಟಕಿ/ಬಾಗಿಲು ಮೂಲ ಸೌಕರ್ಯಗಳಿಲ್ಲದೆ ವಾಸ ಮಾಡಲು ಯೋಗ್ಯವಾಗಿರುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದು ವರದಿ ಮಾಡಿರುತ್ತಾರೆ. |
| ಇ) | ದಶಕಗಳಿಂದ ಸರ್ಕಾರದ ಹಣ ಅಸಮರ್ಪಕ ಬಳಕೆ ಆಗದೇ ಇರುವ ಹಾಗೂ ಹಂಚಿಕೆ ಮುಂತಾದ ಯೋಜನಾ ವೈಫಲ್ಯದ ಕುರಿತು ಸರ್ಕಾರ ಸಮಗ್ರ ತನಿಖೆ ನಡೆಸಿ ವರದಿಯನ್ನು ಪಡೆದುಕೊಂಡಿರುವುದೇ ? (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಒಂಬತ್ತುಕೆರೆ ಎಂಬಲ್ಲಿ 9.25.28 ಎಕರೆ ಜಾಗದಲ್ಲಿ 390 ಮನೆಗಳು ರಚನೆಗೊಂಡಿದ್ದು, ಈ ಮನೆಗಳು ಹಂಚಿಕೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ 2013ರ ಸಿ.ಎ.ಜಿ ಆಡಿಟ್ ವರದಿಯಲ್ಲಿ ಮಹಾಲೇಖಪಾಲರು ಈ ಮನೆಗಳಿಗೆ ಸರಿಯಾಗಿ ಒಳಚರಂಡಿ ವ್ಯವಸ್ಥೆಯನ್ನು ಈವರೆಗೆ ಕಲ್ಪಿಸದೆ ನಿರ್ಮಿಸಲಾದ ಮನೆಗಳನ್ನು ಹಂಚಿಕೆ ಮಾಡಿಲ್ಲವೆಂದು ಮತ್ತು ಇದರ ಮೇಲೆ ಖರ್ಚು ಮಾಡಿದ ಹಣವು ಸದುಪಯೋಗವಾಗಿಲ್ಲವೆಂದು ಪರಿಗಣಿಸಿ ಆಕ್ಷೇಪ ವ್ಯಕ್ತಪಡಿಸಿದ್ದು, ಈ ಬಗ್ಗೆ ಕರ್ನಾಟಕ |

ವಿಧಾನ ಸಭೆ ಸಾರ್ವಜನಿಕ ಲೆಕ್ಕ ಸಮಿತಿ ಸಭೆಯಲ್ಲಿ ದಿನಾಂಕ :19.01.2018 ಮತ್ತು ದಿನಾಂಕ :07.06.2022 ರ ಸಭೆಯಲ್ಲಿ ಚರ್ಚಿಸಿ ಈ ಆಶ್ರಯ ಕಾಲನಿಗೆ ಹೂಡಿರುವ ಹಣವು ದುರುಪಯೋಗವಾಗಿಲ್ಲವೆಂದು ಪರಿಗಣಿಸಿ ಮಹಾಲೇಖಪಾಲಕರ ಆಕ್ಷೇಪಣೆಯನ್ನು ಕೈಬಿಟ್ಟಿರುತ್ತಾರೆ.

ಒಂಬತ್ತುಕೆರೆ ಆಶ್ರಯ ಕಾಲೋನಿಯಲ್ಲಿ 390 ಮನೆಗಳನ್ನು ನಿರ್ಮಿಸಲಾಗಿತ್ತು, ಸದರಿ ಮನೆಗಳ ಗುಣಮಟ್ಟದ ಬಗ್ಗೆ ಖಾಸಗಿರವರು ಲೋಕಾಯುಕ್ತ ಕಛೇರಿಗೆ ನೀಡಿದ ದೂರಿನನ್ವಯ ಮಾನ್ಯ ಲೋಕಾಯುಕ್ತ ಕಛೇರಿಯ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರು ಸಹಾಯಕ ಅಭಿಯಂತರರು-1 ಇದರಿಂದ ತನಿಖೆ ಮಾಡಿಸಲಾಗಿದ್ದು, ಸದರಿ ವರದಿಯಲ್ಲಿ ಕರ್ತವ್ಯ ಪಾಲನೆಯಲ್ಲಿ ನಿರ್ಲಕ್ಷ್ಯ ತೋರಿಸಿ ವಸತಿ ಯೋಜನೆಯಡಿಯಲ್ಲಿ ಕಳಪೆ ಕಾಮಗಾರಿ ಮಾಡಿ ಕಟ್ಟಿದ ಮನೆಗಳನ್ನು ಸರಿಯಾಗಿ ಸಂರಕ್ಷಣೆ ಮಾಡದ ಹಣ ದುರಪಯೋಗ ಪಡಿಸಿಕೊಂಡ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ ಎಂದು ಮಾನ್ಯ ಲೋಕಾಯುಕ್ತರವರು ವರದಿ ಸಲ್ಲಿಸಿರುತ್ತಾರೆ.

ಅದರನ್ವಯ ಸದರಿ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಈ ಕೆಳಕಂಡ 5 ಅಧಿಕಾರಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಮಾಡಲು ಕೆ.ಸಿ.ಎಸ್ (ಸಿಸಿಎ) ನಿಯಮಗಳು 1957ರ ನಿಯಮ 14ಎ ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 62 ಡಿಎಂಕೆ 2014, ಬೆಂಗಳೂರು, ದಿನಾಂಕ :25.03.2014 ರಂತೆ ಮಾನ್ಯ ಉಪ ಲೋಕಾಯುಕ್ತರು ಆದೇಶಿಸಿರುತ್ತಾರೆ.

1. ಶ್ರೀ ನಿತ್ಯಾನಂದ, ಅಭಿಯಂತರರು, ಮಂಗಳೂರು ಮಹಾನಗರ ಪಾಲಿಕೆ.
2. ಶ್ರೀ ಎ.ವಿ ಗಣೇಶ್, ಹಿಂದಿನ ಮುಖ್ಯಾಧಿಕಾರಿ, ಪುರಸಭೆ ಮೂಡಗೆರೆ.
3. ಶ್ರೀ ಎಂ.ಪದ್ಮನಾಭ, ಹಿಂದಿನ ಮುಖ್ಯಾಧಿಕಾರಿ ಪುರಸಭೆ ಉಲ್ಲಾಳ.
4. ಶ್ರೀ ಎಂ ಶ್ರೀನಿವಾಸ್, ಆರೋಗ್ಯ ನಿರೀಕ್ಷಕರು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಜೆಕರ, ಕಾರ್ಕಳ ತಾಲ್ಲೂಕು.
5. ಶ್ರೀ ಬಿ.ಸಿ ಸದಾನಂದ, ಮುಖ್ಯಾಧಿಕಾರಿಗಳು ಪುರಸಭೆ ಕುಂದಾಪುರ.

ಇವರುಗಳ ವಿರುದ್ಧ ಸರ್ಕಾರ ಶಿಸ್ತು ಕ್ರಮ ಕೈಗೊಂಡಿದ್ದು, ಅವರುಗಳ ವೇತನ ಬಡ್ತಿಯನ್ನು ತಡೆಹಿಡಿಯಲಾಗಿರುತ್ತದೆ. ಗುತ್ತಿಗೆದಾರರು ಪುರಸಭೆಯ ಮೇಲೆ ಮಂಗಳೂರು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಸಲ್ಲಿಸಿದ್ದ ದಾವೆಯ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ಮುಗಿದಿದ್ದು, ನ್ಯಾಯಾಲಯದ ಆದೇಶದನ್ವಯ ರೂ.25,84,778/- ಗಳನ್ನು . ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ.

ಸಂಖ್ಯೆ: ವಇ 27 ಹೆಚ್‌ಎಫ್‌ಎ 2023]

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು